

ಅರುಣ ಪಿ. ಭಟ್ಟ

## ವಾರಭವಿಷ್ಯ: 09.04.2026ರಿಂದ 15.04.2026ರವರೆಗೆ




ಅಧಿಕಾರಿಗಳಿಂದ ಉತ್ತಮ ಸಹಕಾರ ಲಭ್ಯ. ವಿದ್ಯಾರ್ಥಿಗಳಿಗೆ ವಿದ್ಯಾ ಪ್ರಗತಿ. ಕಬ್ಬಿಣ ಉಕ್ಕು ಸಿಮೆಂಟ್ ಕಟ್ಟಿಗೆ ಕಂಪನಿ ಮಾಲೀಕರಿಗೆ ವ್ಯವಹಾರಸ್ಥರಿಗೆ ಯಶಸ್ಸು. ಇತರೆ ಉದ್ಯೋಗಿಗಳಿಗೆ ನೌಕರಿಯಲ್ಲಿ ಸ್ಥಿರತೆ ಇರದೆ ಬದಲಾವಣೆ ಸಾಧ್ಯತೆ. ಸರಕಾರಿ ಅಧಿಕಾರಿಗಳು ರಾಜಕಾರಣಿಗಳು ಜನಾನುರಾಗ ಗಳಿಸುವಿರಿ. ಅವಿವಾಹಿತರಿಗೆ ವಿವಾಹ ಯೋಗ. ಶುಭದಿನ: 10. ಸೌಂದರ್ಯ ಲಹರಿ ಪಠಿಸಿರಿ.




ಹೊರನೋಟಕ್ಕೆ ಜನರಿಗೆ ನೀವು ಸುಖಿಗಳಾಗಿ ಕಂಡರೂ ವೈಯಕ್ತಿಕವಾಗಿ ದುಃಖಿಗಳಾಗುತ್ತೀರಿ. ಬಂಧುಗಳು ಹಿತಚಿಂತಕರೂ ನಿಮ್ಮಿಂದ ದೂರ ಸರಿದಾರು. ಈ ವಾರ ನೀವು ಆದಷ್ಟು ತಾಳ್ಮೆಯಿಂದ ವರ್ತಿಸಿ. ಪಾಲುದಾರಿಕೆಯ ವ್ಯವಹಾರಲ್ಲಿ ಬಹಳ ಎಚ್ಚರಿಕೆಯಿಂದ ಇರಿ. ಮಕ್ಕಳ ನಡತೆಯ ವಿಷಯದಲ್ಲಿ ನಿಗಾ ಇರಲಿ. ಜವಳಿ ವಸ್ತುಗಳನ್ನು ಖರೀದಿಸುವಿರಿ. ಶುಭದಿನ: 09. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಬೌದ್ಧಿಕ ಚಟುವಟಿಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳುವಿರಿ. ಶೈಕ್ಷಣಿಕ ಕ್ಷೇತ್ರದಲ್ಲಿರುವವರಿಗೆ ಉದ್ಯೋಗದಲ್ಲಿ ಬಡ್ತಿ ಸಾಧ್ಯತೆ. ಕೃಷಿ ಉತ್ಪನ್ನ ಮಾರಾಟಗಾರರಿಗೆ ಉತ್ತಮ ಲಾಭ. ಆರೋಗ್ಯದಲ್ಲಿ ಕಾಳಜಿ ಇರಲಿ. ದಂಪತಿಗಳಲ್ಲಿ ವೈಮನಸ್ಸು ಬರಬಹುದು. ಆಡುವ ಮಾತಿನ ಮೇಲೆ ನಿಗಾ ಇರಲಿ. ವಿಧ್ಯಾರ್ಥಿಗಳಿಗೆ ಉತ್ತಮ ವಿದ್ಯಾಭ್ಯಾಸ ನಡೆಯುವುದು. ಶುಭದಿನ: 11. ಹನುಮಾನ್ ಚಾಲೀಸ್ ಪಠಿಸಿರಿ.




ಸಂಶಯವು ವಿನಾಶಕ್ಕೆ ಕಾರಣ. ವಿನಾಕಾರಣ ಸಂಶಯದಿಂದ ಮಾನಸಿಕ ನೆಮ್ಮದಿ ಕಳೆದುಕೊಳ್ಳಬೇಡಿ. ದೃಢವಿಶ್ವಾಸದಿಂದ ಹೆಜ್ಜೆಯಿಡಿ. ಸ್ವತಂತ್ರ ಉದ್ಯೋಗ ಮಾಡುವವರಿಗೆ ವ್ಯವಹಾರದಲ್ಲಿ ನಷ್ಟ. ಕೋರ್ಟ್ ಕೆಲಸಗಳಿಗೆ ವ್ಯಥಾ ಅಲೆದಾಟ. ವಿದ್ಯಾರ್ಥಿಗಳಿಗೆ ಮಾನಸಿಕ ಚಂಚಲತೆ ವಿದ್ಯಾಭ್ಯಾಸಕ್ಕೆ ಅಡಚಣೆ. ವಾರಾಂತ್ಯದಲ್ಲಿ ಸಮಸ್ಯೆಗಳು ಮಂಜಿನಂತೆ ಕರಗುವವು. ಶುಭದಿನ: 12. ವಿಷ್ಣುಸಹಸ್ರನಾಮ ಪಠಣ ಮಾಡಿರಿ.




ಸಂಪತ್ತನ್ನು ಯೋಗ್ಯವಾದ ಮಾರ್ಗದಲ್ಲಿ ಉಪಯೋಗಿಸಿ. ಭೂಮಿ, ಮನೆ ಖರೀದಿಗೆ ಉತ್ತಮ ಸಮಯ. ನೌಕರರಿಗೆ, ಉದ್ಯೋಗಿಗಳಿಗೆ ಸ್ಥಳ ಬದಲಾವಣೆ ಸಂಭವ. ವಾಹನ, ಯಂತ್ರೋಪಕರಣ ಕಬ್ಬಿಣಕ್ಕೆ ಸಂಬಂಧಿಸಿದ ಉದ್ಯಮದಲ್ಲಿ ಉತ್ತಮ ಲಾಭ. ಜೀವನದಲ್ಲಿ ಹಚ್ಚ ಹಸಿರಾಗಿಸುವ ನೆನಪುಗಳನ್ನು ನೀಡಬಲ್ಲಂಥ ಘಟನೆಗಳು ಜರುಗಬಹುದು. ಶುಭದಿನ: 10. ಶಿವಕವಚ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಬದುಕು ನಿಸ್ಸಾರ ಎನ್ನಿಸಬಹುದು. ಬಂಧುಗಳು ನಿಮ್ಮ ವಿರುದ್ಧ ಪಿತೂರಿ ಮಾಡಬಹುದು. ಉದ್ಯೋಗದಲ್ಲಿ ಕಿರಿಕಿರಿ. ರಾಜಕಾರಣಿಗಳಿಗೆ ಪ್ರಗತಿ ಕುಂಠಿತ. ಮುಖಂಡರಲ್ಲಿ ವೈಮನಸ್ಸು. ಆಸ್ತಿಗೆ ಸಂಬಂಧಿಸಿದಂತೆ ತೊಂದರೆ. ವಿದ್ಯಾಭ್ಯಾಸದಲ್ಲಿ ತೊಂದರೆ ಕಾಣಿಸಬಹುದು. ಯಾವುದೇ ಕಾರ್ಯಕ್ಕೂ ಆತುರದ ನಿರ್ಧಾರ ಮಾಡಬೇಡಿ. ಶುಭದಿನ: 11. ಈಶ್ವರನಿಗೆ ತಿಲಾರ್ಚನೆ ಮಾಡಿರಿ.




ಮನೆಯಲ್ಲಿ ಸ್ನೇಹದ ವಾತಾವರಣ. ವೈವಾಹಿಕ ಜೀವನದಲ್ಲಿ ಸಂತಸ. ಹಳೆ ಸಾಲಗಳನ್ನು ತೀರಿಸುವಿರಿ. ಸಾಮಾಜಿಕ ಕ್ಷೇತ್ರದಲ್ಲಿ ಇರುವವರು ಜನರೊಂದಿಗೆ ನಿಷ್ಠುರವಾಗಿ ವರ್ತಿಸದಿರಿ. ಅಜೀರ್ಣದಿಂದ ತೊಂದರೆ ಕಾಣಿಸಬಹುದು. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮ ಆಯೋಜಿಸುವಿರಿ. ವಿದ್ಯಾರ್ಥಿಗಳಿಗೆ ಯಶಸ್ಸು ಸಿಗಲಿದೆ. ಶುಭದಿನ: 10. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಗುರು ಹಿರಿಯರ ಆಶೀರ್ವಾದ ಪಡೆದು ಮಹತ್ವದ ನಿರ್ಣಯ ತೆಗೆದುಕೊಳ್ಳಿ. ವ್ಯವಹಾರಸ್ಥರಿಗೆ ಉತ್ತಮ ಲಾಭ. ಆರೋಗ್ಯದಲ್ಲಿ ಸ್ವಲ್ಪಮಟ್ಟಿಗೆ ಕಿರಿಕಿರಿ. ಅಗ್ನಿಯಿಂದ ಅವಘಡ ಸಾಧ್ಯತೆ, ಎಚ್ಚರಿಕೆಯಿಂದ ಇರಿ. ಕೋರ್ಟ್ ಕಾನೂನು ಪ್ರಕರಣಗಳು ಇದ್ದಲ್ಲಿ ಪರಿಹಾರವಾಗುತ್ತದೆ. ಕುಟುಂಬ ಸಮೇತ ಚಿಕ್ಕ ಪ್ರವಾಸವೊಂದನ್ನು ಮಾಡುವಿರಿ. ಅವಿವಾಹಿತರಿಗೆ ವಿವಾಹ ಯೋಗ. ಶುಭದಿನ: 12. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ವಾಹನ ಖರೀದಿ ಯೋಗ. ಸಂಗೀತ ಸಾಹಿತ್ಯ ಲೇಖನ ಕ್ಷೇತ್ರದಲ್ಲಿರುವವರಿಗೆ ಉತ್ತಮ ಅಭಿವೃದ್ಧಿ. ಆಕಸ್ಮಿಕ ಧನಲಾಭ. ತಂದೆತಾಯಿ ಆರೋಗ್ಯದಲ್ಲಿ ಚೇತರಿಕೆ. ಮನೆಯ ವ್ಯವಹಾರಗಳಲ್ಲಿ ನೆಮ್ಮದಿ. ಸಂಘ ಸಂಸ್ಥೆಗಳ ಸದಸ್ಯರಾಗಿ ಸಾಮಾಜಿಕ ಸೇವೆಯಲ್ಲಿ ತೊಡಗುವಿರಿ. ವಾರದ ಅಂತ್ಯದಲ್ಲಿ ಆರ್ಥಿಕವಾಗಿ ಚೇತರಿಕೆ. ಶುಭದಿನ: 13. ನಾಗಫಣಿ ಪೂಜೆ ಕ್ಷೀರಾಭಿಷೇಕ ಮಾಡಿರಿ.




ಆರ್ಥಿಕವಾಗಿ ಸುಭದ್ರವಾಗುವಿರಿ. ಹಳೆಸಾಲ ತೀರಿಸುವಿರಿ. ನಿಮ್ಮ ವಿರೋಧಿಗಳ ಆಟ ನಿಮ್ಮ ಮುಂದೆ ನಡೆಯದು. ಕಲೆ, ಸಂಸ್ಕೃತಿ, ಹೋಟೆಲ್, ಸಿನಿಮಾ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಉನ್ನತಿ. ಸರಕಾರದ ಕೆಲಸಗಳು ಅಡೆ ತಡೆ ಇಲ್ಲದೆ ನಡೆಯುವುದು. ಆಸ್ತಿಗೆ ಸಂಬಂಧಪಟ್ಟ ವಿವಾದಗಳು ಇದ್ದಲ್ಲಿ ಇತ್ಯರ್ಥವಾಗುವುದು. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು. ಶುಭದಿನ: 10. ಶ್ರೀ ದುರ್ಗಾದೇವಿ ಆರಾಧನೆ ಮಾಡಿರಿ.




ಅಸ್ಥಿರವಾದ ಮನಸ್ಸಿಂದ ಗೊಂದಲವಾಗುವುದು. ಸಜ್ಜನರ ಸಹವಾಸ ಆಧ್ಯಾತ್ಮಿಕ ಚಿಂತನೆಯ ಅವಶ್ಯಕತೆ ಇದೆ. ನ್ಯಾಯಾಲಯದ ಕಾರ್ಯಗಳಲ್ಲಿ ಅಡೆತಡೆ ಉಂಟಾಗುವುದು. ನಂಬಿದ ಜನರು ನಂಬಿಕೆ ಕಳೆದುಕೊಳ್ಳುವರು. ವೈವಾಹಿಕ ಸಂಬಂಧಗಳು ಹದಗೆಡುವ ಪ್ರಸಂಗ. ಆಡುವ ಮಾತಿನ ಮೇಲೆ ನಿಗಾವಹಿಸಿ. ವಾರಾಂತ್ಯದಲ್ಲಿ ಮಕ್ಕಳಿಂದ ಶುಭ ಸುದ್ದಿ. ಶುಭದಿನ: 11. ಮಹಾವಿಷ್ಣುವಿನ ಆರಾಧನೆ ಮಾಡಿರಿ.




ಪ್ರೀತಿಪಾತ್ರರೊಂದಿಗೆ ಉತ್ತಮ ಸಮಯವನ್ನು ಕಳೆಯಲಿದ್ದೀರಿ. ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚು ಸಕ್ರಿಯವಾಗಿ ಪಾಲ್ಗೊಳ್ಳಲಿದ್ದೀರಿ. ಹೆಸರಾಂತ ಸಂಸ್ಥೆಯೊಂದರಲ್ಲಿ ಉದ್ಯೋಗ ದೊರೆಯುವ ಅವಕಾಶ ಇದೆ. ಸರಕಾರಿ ಉದ್ಯೋಗಿಗಳಿಗೆ ಪದೋನ್ನತಿ ಸಿಗುವ ಯೋಗ ಇದೆ. ನಿಮ್ಮ ಕೆಲಸ ಸಾಧನೆಯಿಂದ ಪೋಷಕರು ಸಂತೋಷಪಡುತ್ತಾರೆ. ಶೈಕ್ಷಣಿಕ ರಂಗದಲ್ಲಿ ಉತ್ತಮ ಪ್ರಗತಿ. ಶುಭದಿನ: 14. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.